**SDA / Jr. Asst. / Jr. Asst. in Food & Civil Supplies**
**GENERAL KANNADA (Subject Code: 70)**
**Examination held on 18/10/2015**
**KEY CHART**
**Question Booklet Series - 'D'**

| Question Number | Key Answer | Question Number | Key Answer | Question Number | Key Answer | Question Number | Key Answer |
|---|---|---|---|---|---|---|---|
| 1 | 1 | 26 | 1 | 51 | 2 | 76 | 3 |
| 2 | 2 | 27 | 3 | 52 | 2 | 77 | 1 |
| 3 | 4 | 28 | 1 | 53 | 4 | 78 | 3 |
| 4 | 4 | 29 | 2 | 54 | 4 | 79 | 1 |
| 5 | 1 | 30 | 2 | 55 | 1 | 80 | 4 |
| 6 | 2 | 31 | 2 | 56 | 3 | 81 | 3 |
| 7 | 1 | 32 | 3 | 57 | 1 | 82 | 3 |
| 8 | 1 | 33 | 1 | 58 | 3 | 83 | 4 |
| 9 | 2 | 34 | 4 | 59 | 1 | 84 | 1 |
| 10 | 3 | 35 | 3 | 60 | 2 | 85 | 1 |
| 11 | 1 | 36 | 4 | 61 | 1 | 86 | 1 |
| 12 | 4 | 37 | 4 | 62 | 2 | 87 | 3 |
| 13 | 4 | 38 | 1 | 63 | 2 | 88 | 4 |
| 14 | 4 | 39 | 2 | 64 | 2 | 89 | 2 |
| 15 | 4 | 40 | 4 | 65 | 1 | 90 | 2 |
| 16 | 4 | 41 | 4 | 66 | 3 | 91 | 2 |
| 17 | 4 | 42 | 4 | 67 | 1 | 92 | 3 |
| 18 | 4 | 43 | 3 | 68 | 1 | 93 | 2 |
| 19 | 3 | 44 | 1 | 69 | 2 | 94 | 3 |
| 20 | 1 | 45 | 3 | 70 | 3 | 95 | 2 |
| 21 | 2 | 46 | 2 | 71 | 2 | 96 | 3 |
| 22 | 2 | 47 | 4 | 72 | 2 | 97 | 1 |
| 23 | 2 | 48 | 4 | 73 | 1 | 98 | 2 |
| 24 | 2 | 49 | 4 | 74 | 2 | 99 | 1 |
| 25 | 2 | 50 | 2 | 75 | 4 | 100 | 3 |

www.shikarat.com

SDA

**ಈ ಪ್ರಶ್ನಾಪುಸ್ತಿಕೆಯಲ್ಲಿ ಸಾಮಾನ್ಯ ಕನ್ನಡ** (ವಿಷಯ ಸಂಕೇತ : 70) **ಹಾಗೂ ಸಾಮಾನ್ಯ ಇಂಗ್ಲೀಷ್** (ವಿಷಯ ಸಂಕೇತ : 71) **ಪ್ರಶ್ನೆ ಪತ್ರಿಕೆಗಳಿವೆ. ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಇಂಗ್ಲೀಷ್ ಇವುಗಳಲ್ಲಿ ಯಾವುದಾದರೂ ಒಂದಕ್ಕೆ ಮಾತ್ರ ಉತ್ತರಿಸಬೇಕು. ಅಭ್ಯರ್ಥಿಗಳು ತಾವು ಆಯ್ಕೆ ಮಾಡಿ, ಉತ್ತರಿಸುವ ವಿಷಯು ಸಂಕೇತವನ್ನು ಕಡ್ಡಾಯವಾಗಿ** ಓ.ಎಂ.ಆರ್. **ಮೇಲೆ ನಿಗದಿತ ಸ್ಥಳದಲ್ಲಿ** ನಮೂದಿಸತಕ್ಕದ್ದು.

ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.

ವಿಷಯ ಸಂಕೇತ **70**

**2015**

# ಪ್ರಶ್ನೆಪುಸ್ತಿಕೆ
# ಸಾಮಾನ್ಯ ಕನ್ನಡ

ಪ್ರಶ್ನೆಪುಸ್ತಿಕೆ ವರ್ಷನ್ ಕೋಡ್ **D**

**ಗರಿಷ್ಠ ಸಮಯ : (1½) ಒಂದೂವರೆ ಗಂಟೆಗಳು**

**ಗರಿಷ್ಠ ಅಂಕಗಳು : 100**

## ಸೂಚನೆಗಳು

1. OMR ಉತ್ತರ ಹಾಳೆಯಲ್ಲಿ ಪ್ರಶ್ನೆ ಪತ್ರಿಕೆ ಶ್ರೇಣಿಯನ್ನು ಎನ್ ಕೋಡ್ ಮಾಡುವ ಮೊದಲು ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್ A, B, C, D ಅನ್ನು OMR ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು.
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ |
| --- |
| 2022173 |

4. ಈ ಪ್ರಶ್ನೆ ಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು 4 ಉತ್ತರಗಳನ್ನು ಒಳಗೊಂಡಿರುತ್ತದೆ. ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ **ಅತ್ಯುತ್ತಮವೆನಿಸುವ** ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು **ಕೇವಲ ಒಂದು ಉತ್ತರವನ್ನು** ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಪತ್ರಿಕೆಯ ಮೇಲೆ ಕೇವಲ **ಕಪ್ಪು** ಅಥವಾ **ನೀಲಿ ಶಾಯಿಯ ಬಾಲ್‌ಪಾಯಿಂಟ್** ಪೆನ್ನಿನಲ್ಲಿ **ಮಾತ್ರ** ಗುರುತು ಮಾಡಬೇಕು. ಉತ್ತರ ಪತ್ರಿಕೆ ಹಾಳೆಯಲ್ಲಿನ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿರಿ**. ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಉತ್ತರ ಪತ್ರಿಕೆಯಲ್ಲಿ ಉತ್ತರಗಳನ್ನು ಗುರುತಿಸಲು ಪ್ರಾರಂಭಿಸುವ ಮೊದಲು **ನೋಂದಣಿ ಸಂಖ್ಯೆ ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್** ಇತ್ಯಾದಿಗಳನ್ನು (ನಿಮ್ಮ ಸಹಿ ಹಾಗೂ ಸಂವೀಕ್ಷಕರ ಸಹಿಯೊಂದಿಗೆ) ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿ/ಗುರುತು ಮಾಡಿರಿ.
8. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
9. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆಯ ಹಾಳೆಯಲ್ಲಿ ಇನ್ನಾವುದೇ ಗುರುತುಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಪತ್ರಿಕೆಯ ಹಾಳೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
10. ಯಾವುದೇ ರೀತಿಯ ಕ್ಯಾಲ್ಕ್ಯುಲೇಟರ್‌ಗಳನ್ನು ಬಳಸಲು ಅನುಮತಿ ಇಲ್ಲ.
11. ಉತ್ತರ ಪತ್ರಿಕೆಯಲ್ಲಿ ಕಂಡು ಬರುವ ಬಾರ್ ಕೋಡ್ ಗಳ ಮೇಲೆ ಯಾವುದೇ ಗುರುತು ಮಾಡತಕ್ಕದ್ದಲ್ಲ.

***Note :*** *English version of the instructions is printed on the back cover of this booklet.*



www.shikarat.com

ಖಾಲಿ ಜಾಗದಲ್ಲಿರಬೇಕಾದ ಸೂಕ್ತ ಪದವನ್ನು ಸಂಖ್ಯೆಯ ಮೂಲಕ ಗುರ್ತಿಸಿರಿ.

**(ಪ್ರಶ್ನೆಸಂಖ್ಯೆ 1-5)**

ಹರಪ್ಪ-ಮೊಹೆಂಜೋದಾರೋಗಳಲ್ಲಿ ____ ಸಂಶೋಧನೆಗಳು ನಡೆಯುವುದಕ್ಕೆ ಮುಂಚೆ ಭರತ ಖಂಡದ ಹೆಸರು ಅತ್ಯಂತ ಪ್ರಾಚೀನ ನಾಗರೀಕತೆ-ಗಳನ್ನುಳ್ಳ ದೇಶಗಳ ಸಾಲಿನಲ್ಲಿ ಸೇರಿರಲಿಲ್ಲ. ಆದರೆ ____ ತೀರದ ಪ್ರಾಚೀನ ನಾಗರೀಕತೆಯ ಅವಶೇಷಗಳು ವಿದ್ವಾಂಸರನ್ನು ಚಕಿತಗೊಳಿಸಿದವು. ಭರತ ಖಂಡದ ಸಾಂಸ್ಕೃತಿಕ ಇತಿಹಾಸವನ್ನು ____ ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ದುವು. ಈ ಸಂಸ್ಕೃತಿಯ ಕಾಲವನ್ನು ನಿರ್ಧಿಷ್ಟವಾಗಿ ಹೇಳಲು ಈಗಿರುವ ಆಧಾರಗಳು ಸಾಲವು. ಅನೇಕ ವಿದ್ವಾಂಸರ ಅಭಿಪ್ರಾಯದಂತೆ ____ ವರೆಗೆ ಈ ಸಂಸ್ಕೃತಿ ಉಚ್ಛ್ರಾಯ ಸ್ಥಿತಿಯಲ್ಲಿತ್ತೆನ್ನಬಹುದು. ಈ ದೃಷ್ಟಿಯಿಂದ ____ ಮೊದಲಾದ ಪ್ರಾಚೀನ ನಾಗರೀಕತೆಗಿಂತ ಹೆಚ್ಚು ನಾಗರಿಕರಾಗಿದ್ದರೆನ್ನಬಹುದು.

1. (1) ಪ್ರಾಕ್ತನ
   (2) ಉತ್ಖನನ
   (3) ಶಿಸ್ತಿನ
   (4) ಪುರೋಗಾಮಿನ

2. (1) ಹಿಮಾಲಯದ
   (2) ಸಿಂಧೂ
   (3) ಬ್ರಹ್ಮಪುತ್ರ
   (4) ಕಾಳಿ

3. (1) ನೂರು
   (2) ಇನ್ನೂರು
   (3) ಐನೂರು
   (4) ಸಾವಿರಾರು



www.shikarat.com

4. (1) ಕ್ರಿ. ಶಕ 200 ರಿಂದ 300

(2) ಕ್ರಿ. ಶಕ 500 ರಿಂದ 1000

(3) ಕ್ರಿ. ಪೂ. 100 ರಿಂದ 200

(4) ಕ್ರಿ. ಪೂ. 2500 ರಿಂದ 1500

5. (1) ಈಜಿಪ್ಟ್

(2) ಬ್ಯಾಬಿಲೋನಿಯ

(3) ಮೆಸಪೊಟೋಮಿಯ

(4) ಮ್ಯಾಸಿಡೋನಿಯ

**ಸೂಚನೆ :** ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ತುಂಬಲು ನಾಲ್ಕು ರೂಪ ನೀಡಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರ್ತಿಸಿ. **(ಪ್ರಶ್ನೆಸಂಖ್ಯೆ 6-10)**

6. ಮಿತ್ರವಿಂದ ಗೋವಿಂದ- ಸಾಹಿತ್ಯದ ಯಾವ ಪ್ರಕಾರ ?

(1) ಸಣ್ಣ ಕತೆ

(2) ನಾಟಕ

(3) ಪ್ರಬಂಧ

(4) ಕಾದಂಬರಿ

7. ಇತ್ತೀಚೆಗೆ ನಿಧನರಾದ ರಾಷ್ಟ್ರಕವಿ ಯಾರು ?

(1) ಶಿವರುದ್ರಪ್ಪ

(2) ಮಾಸ್ತಿ

(3) ಅನಂತಮೂರ್ತಿ

(4) ಪೂರ್ಣಚಂದ್ರ ತೇಜಸ್ವಿ



www.shikarat.com

8. ರತ್ನಾಕರವರ್ಣಿ ಬರೆದ ಕಾವ್ಯದ ಹೆಸರು ಯಾವುದು ?

(1) ಭರತೇಶ ವೈಭವ

(2) ಸಿದ್ಧರಾಮ ಚರಿತೆ

(3) ಪ್ರಭುಲಿಂಗ ಲೀಲೆ

(4) ಜೈಮಿನಿ ಭಾರತ

9. ಹರಿಶ್ಚಂದ್ರ ಕಾವ್ಯದ ಕರ್ತೃ ಯಾರು ?

(1) ಹರಿಹರ

(2) ರಾಘವಾಂಕ

(3) ಚಾಮರಸ

(4) ನಯಸೇನ

10. ದಾನ ಚಿಂತಾಮಣಿ ಎಂದು ಯಾರನ್ನು ಕರೆಯುತ್ತೇವೆ ?

(1) ಅಕ್ಕಮಹಾದೇವಿ

(2) ಸಂಚಿ ಹೊನ್ನಮ್ಮ

(3) ಅತ್ತಿಮಬ್ಬೆ

(4) ನಿಲಾಂಬಿಕೆ

ಸೂಚನೆ : ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಸಮಾನವಾದ ಅಂಶವಿರುವ ಮೂರು ಪದಗಳಿವೆ. ಭಿನ್ನವಾಗಿ ಉಳಿದಿರುವ ಪದವನ್ನು ಗುರುತಿಸಿ. **(ಪ್ರಶ್ನೆಸಂಖ್ಯೆ 11-16)**

ಉದಾಹರಣೆ :

(1) ಚುನಾವಣೆ

(2) ಆಸ್ಪತ್ರೆ

(3) ಮುಖ್ಯಮಂತ್ರಿ

(4) ಭಾಷಣ

ಇವುಗಳಲ್ಲಿ (1), (3), (4) ರಾಜಕೀಯಕ್ಕೆ ಸಂಬಂಧಿಸಿದ ಪದಗಳು. ಭಿನ್ನರೂಪ (2) ಆಸ್ಪತ್ರೆ, ಆದ್ದರಿಂದ (2) ನ್ನು ಗುರುತಿಸಬೇಕು.

11. (1) ತಲೆದಂಡ

(2) ಮೈಸೂರು ಮಲ್ಲಿಗೆ

(3) ನಾಕುತಂತಿ

(4) ಸಾವಿರಾರು ನದಿಗಳು

12. (1) ಆಡುತ್ತಾನೆ

(2) ನೋಡುತ್ತಾನೆ

(3) ಓಡುತ್ತಾನೆ

(4) ಮಲಗುತ್ತಾನೆ

13. (1) ರಾಮಕೃಷ್ಣ ಪರಮಹಂಸ

(2) ವಿನೋಭಾ ಬಾವೆ

(3) ಸಾಯಿ ಬಾಬಾ

(4) ರಾಜಾ ರಾಮಣ್ಣ

www.shikarat.com

14. (1) ನೆನ್ನೆ
(2) ಇಂದು
(3) ನಾಳೆ
(4) ಕತ್ತಲೆ

15. (1) ಭೈರಪ್ಪ
(2) ತ್ರಿವೇಣಿ
(3) ತಾರಾಸು
(4) ಶಿಶುನಾಳ ಷರೀಫ

16. (1) ರಾಗಿ
(2) ಭತ್ತ
(3) ತೊಗರಿ
(4) ಎಣ್ಣೆ

ಸೂಚನೆ : ಕೆಳಗೆ ಕೊಟ್ಟ ನಾಲ್ಕು ಪದಗಳಲ್ಲಿ ಒಂದು ಪದ ಮಾತ್ರ ಅನ್ಯಭಾಷಾ ಪದ ಅದನ್ನು ಗುರ್ತಿಸಿ. **(ಪ್ರಶ್ನೆಸಂಖ್ಯೆ 17-19)**

17. (1) ರೊಟ್ಟಿ
(2) ದೋಸೆ
(3) ಚಪಾತಿ
(4) ದಾಲ್ ಫ್ರೈ

18. (1) ಜಿಂಕೆ
(2) ಮೊಲ
(3) ನವಿಲು
(4) ವ್ಯಾಘ್ರ

19. (1) ತಲೆ
(2) ಕಾಲು
(3) ಹಸ್ತ
(4) ಕಿವಿ

ಸೂಚನೆ : ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಒಂದು ಮಾತ್ರ ಅಚ್ಚ ಕನ್ನಡ ಪದ, ಉಳಿದ ಮೂರು ಅನ್ಯಭಾಷಾ ಪದಗಳು, ಕನ್ನಡ ಪದವನ್ನು ಗುರ್ತಿಸಿ. **(ಪ್ರಶ್ನೆಸಂಖ್ಯೆ 20-21)**

20. (1) ಮೂಡಣ
(2) ಪೋಲೀಸ್
(3) ಖಾನಾವಳಿ
(4) ತಮಂದ

21. (1) ಮಹರ್ಷಿ
(2) ಅರಸ
(3) ಕಾಲೇಜ್
(4) ಅಮಲ್ದಾರ್

ಸೂಚನೆ : ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನು ಅವುಗಳಿಗೆ ಅರ್ಥಗಳನ್ನು ಕೊಟ್ಟಿದೆ. ನುಡಿಗಟ್ಟಿನ ಸರಿಯಾದ ಅರ್ಥ ಯಾವುದೆಂದು ಗುರ್ತಿಸಿ. **(ಪ್ರಶ್ನೆಸಂಖ್ಯೆ 22-25)**

22. ಕರತಲಾಮಲಕ
(1) ಕೈಚಳಕ ತೋರು
(2) ಚೆನ್ನಾಗಿ ತಿಳಿದುಕೊಂಡದ್ದು
(3) ಕೈಯಿಂದ ಮುಖದ ತನಕ
(4) ಗೊತ್ತು ಎಂಬ ಅಹಂಕಾರ


www.shikarat.com

23. ಅಚಾತುರ್ಯ

(1) ಬೇಕಂತ ಮಾಡಿದ ಕಾರ್ಯ

(2) ಕೈತಪ್ಪಿ ನಡೆದ ಕಾರ್ಯ

(3) ಆತುರದಿಂದ ಮಾಡಿದ ಕಾರ್ಯ

(4) ಕೆಟ್ಟ ಹೆಸರು ತರುವ ಕಾರ್ಯ

24. ಒಳಗುಟ್ಟು

(1) ಕಿವಿಯಿಂದ ಕಿವಿಗೆ ಹೇಳುವುದು

(2) ಅಂತರಂಗವನ್ನು ಬಹಿರಂಗ ಮಾಡದೆ ಇರುವುದು

(3) ಒಳಗೊಳಗೆ ಹೇಳುವುದು

(4) ಗುಟ್ಟು ರಟ್ಟು ಮಾಡುವುದು

25. ಚಾಡಿಕೋರ

(1) ಇನ್ನೊಬ್ಬರ ಮೇಲೆ ಸದಾ ದೂರು ಹೇಳುವವ

(2) ತನಗಾಗದವರ ಮೇಲೆ ಸೇಡು ತೀರಿಸಿಕೊಳ್ಳುವವ

(3) ಇನ್ನೊಬ್ಬರ ವಿಶ್ವಾಸ ಗಳಿಸಲು ಹೇಳುವ ಚಾಡಿ

(4) ಹಿತ್ತಾಳೆ ಕಿವಿಯವರಿಗೆ ಇವರು ಬಲು ಪ್ರಿಯ

ಸೂಚನೆ : ಕೆಳಗೆ ಕೊಟ್ಟಿರುವ ಪದಗಳಿಗೆ ವಿರುದ್ಧಾರ್ಥಕವಾದ ಶಬ್ದಗಳನ್ನು ಗುರುತಿಸಿ. **(ಪ್ರಶ್ನೆಸಂಖ್ಯೆ 26-30)**

ಉದಾ : <u>ಅಂತರ್ವಾಣಿ</u>

(1) ಹೊರವಾಣಿ

(2) ದುರ್ವಾಣಿ

(3) ಬಹಿರ್ವಾಣಿ

(4) ಒಳಗಿನವಾಣಿ

ಇಲ್ಲಿ (3) ಬಹಿರ್ವಾಣಿ ಸರಿಯಾದ ಉತ್ತರ. ಆದ್ದರಿಂದ (3) ಎಂದು ಗುರುತಿಸಿ.

26. <u>ಹೊಗಳಿಕೆ</u>

(1) ತೆಗಳಿಕೆ (2) ಬಾಳಿಕೆ
(3) ತಿಳುವಳಿಕೆ (4) ನಡವಳಿಕೆ

27. <u>ಜ್ಞಾನಿ</u>

(1) ಸುಜ್ಞಾನಿ (2) ವಿಜ್ಞಾನಿ
(3) ಅಜ್ಞಾನಿ (4) ಮಗ್ನಾನಿ

28. <u>ಸಹಕಾರ</u>

(1) ಅಸಹಕಾರ

(2) ಸುಹಾಕಾರ

(3) ನಿರ್ವಿಕಾರ

(4) ಅಸುರಾಕಾರ

29. <u>ಅಂತರಂಗ</u>

(1) ಅನಂತರಂಗ

(2) ಬಹಿರಂಗ

(3) ಒಳರಂಗ

(4) ಭಜರಂಗ

30. <u>ಆರ್ಯ</u>

(1) ನಾಗರಿಕ (2) ಅನಾರ್ಯ
(3) ಅನಾಗರಿಕ (4) ನೈತಿಕ



www.shikarat.com

ಸೂಚನೆ : ಈ ಕೆಳಗಿನ ಶಬ್ದಗಳಲ್ಲಿ ಸಮಾನಾರ್ಥಕವಾದ, ಅತಿ ಸಮೀಪದ ಅರ್ಥವುಳ್ಳ ರೂಪವನ್ನು ಗುರ್ತಿಸಿ. **(ಪ್ರಶ್ನೆಸಂಖ್ಯೆ 31-35)**

**31.** ಸಲ್ಲಾಪ
(1) ಕಿತ್ತಾಡುವುದು
(2) ಒಳ್ಳೆಯ ಮಾತುಕತೆ
(3) ಪ್ರಲಾಪಿಸುವುದು
(4) ಆಜ್ಞಾಪಿಸುವುದು

**32.** ಅಂಬುಜ
(1) ಸಂಪಿಗೆ
(2) ಮಲ್ಲಿಗೆ
(3) ಕಮಲ
(4) ಕೇದಿಗೆ

**33.** ಚಲ
(1) ಚಲಿಸುವ
(2) ಸ್ಥಿರವಾದ
(3) ಚಲಿಸದಿರುವ
(4) ನಿಂತಿರುವ

**34.** ವೈಚಾರಿಕತೆ
(1) ವೈಜ್ಞಾನಿಕ ತಿಳುವಳಿಕೆ
(2) ಮೂಢ ನಂಬಿಕೆ ಇಲ್ಲದವ
(3) ಶಾಸ್ತ್ರಗಳನ್ನು ಹೀಗಳೆಯುವ
(4) ವಿಚಾರಶೀಲವುಳ್ಳ

**35.** ವಿಮರ್ಶಕ
(1) ನಿರ್ದಯಿ
(2) ಸಮಾನ ಮನಸುಳ್ಳವ
(3) ಒರೆಗಚ್ಚಿ ಮೌಲ್ಯ ನಿರ್ಣಯ ಮಾಡುವವ
(4) ಪೂರ್ವಾಗ್ರಹ ಪೀಡಿತ

ಸೂಚನೆ : ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಮೂರು ಭಾಗಗಳಾಗಿ ವಿಭಜಿಸಿ ಪ್ರತಿಭಾಗದ ಕೆಳಗೆ ಗೆರೆ ಎಳೆಯಲಾಗಿದೆ. ಅವುಗಳಿಗೆ (1), (2) ಮತ್ತು (3) ಎಂಬ ಸಂಕೇತಗಳನ್ನು ಕೊಡಲಾಗಿದೆ. (4) ಯನ್ನು ತಪ್ಪಿಲ್ಲ ಎಂದು ಕರೆದು (4) ಎಂಬ ಸಂಕೇತ ಕೊಡಲಾಗಿದೆ. ಈಗ ತಪ್ಪಾದ ಭಾಗವನ್ನು ಗುರುತಿಸಿರಿ. ತಪ್ಪಿಲ್ಲದಿದ್ದರೆ (4) ಸಂಕೇತವನ್ನು ಗುರುತಿಸಿರಿ. **(ಪ್ರಶ್ನೆಸಂಖ್ಯೆ 36-40)**

ಉದಾ :

ಜೀವಸೃಷ್ಟಿಗೆ ಪ್ರಕೃತಿ (1) ಕಾರಣವಾದಂತೆ (2)
ಜೀವನಾಶಕ್ಕೂ ಪ್ರಕೃತಿ ಕಾರಣವಾಗುತ್ತದೆ. (3)
ತಪ್ಪಿಲ್ಲ (4)

ಇದರ (3) ಭಾಗದಲ್ಲಿ ಪುನರಾವರ್ತನೆಯಾಗಿರುವ ಪ್ರಕೃತಿ ಪದ ತಪ್ಪು ಆದ್ದರಿಂದ (3) ತಪ್ಪೆಂದು ಭಾವಿಸಿ ಗುರುತಿಸಬಹುದು.

**36.** ಸಸ್ತನಿಗಳಲ್ಲೆಲ್ಲಾ (1) ಕ್ರೂರ ಪ್ರಾಣಿ (2) ಮನುಷ್ಯ (3)
ತಪ್ಪಿಲ್ಲ (4)

www.shikarat.com

37. ಇಂದಿನ ಜಗತ್ತು (1) ಉಗ್ರವಾದಿಗಳ ಹಿಂಸೆಯಿಂದ (2)

ನಲುಗುತ್ತಿದೆ (3) ತಪ್ಪಿಲ್ಲ (4)

38. ಜಾಗತೀಕರಣದ ಮೌಲ್ಯದಿಂದ (1)

ಮಾನವೀಯ ಮೌಲ್ಯಗಳು (2)

ಬೆಲೆ ಕಳೆದುಕೊಳ್ಳುತ್ತಿವೆ (3) ತಪ್ಪಿಲ್ಲ (4)

39. ವಿಶ್ವಸಂಸ್ಥೆಯ ಖಾಯಂ ಸದಸ್ಯತ್ವಕ್ಕೆ (1)

ಭಾರತ ಖಾಯಂ ಸದಸ್ಯತ್ವಕ್ಕಾಗಿ (2)

ಹಕ್ಕೊತ್ತಾಯ ಮಾಡಿತು (3) ತಪ್ಪಿಲ್ಲ (4)

40. ಪರಿಸರ (1) ಮನುಷ್ಯನನ್ನು (2) ರೂಪಿಸುತ್ತದೆ (3)

ತಪ್ಪಿಲ್ಲ (4)

**ಸೂಚನೆ :** ಗೆರೆಯಿಂದ ಸೂಚಿಸಿದ ಭಾಗದಲ್ಲಿ ದೋಷವಿದ್ದರೆ ಮುಂದೆ ಕೊಡಲಾದ ನಾಲ್ಕು ರೂಪಗಳಲ್ಲಿ ಸರಿಯಾದುದನ್ನು ಗುರ್ತಿಸಿ.

**(ಪ್ರಶ್ನೆಸಂಖ್ಯೆ 41-45)**

41. ಅಜ್ಜಯ್ಯನು ಅಭ್ಯಂಜನ ವನ್ನು ಮಾಡಿದನು.
(1) ಅಬ್ಯಂಜನ
(2) ಅಬಯಂಜನ
(3) ಆಭ್ಯಂಜನ
(4) ಸರಿಯಾಗಿದೆ

42. ಜಾಗತೀಕರಣ ಅಮೇರಿಕಾ ಪ್ರೇರಿತ ಆರ್ಥಿಕ ವ್ಯವಸ್ಥೆ
(1) ಜಾಗತಿಕರಣ
(2) ಜಗತೀಕರಣ
(3) ಜಾಗಾತೀಕರಣ
(4) ಸರಿಯಾಗಿದೆ

43. ಅವನಿಗೆ ಉಪನಿಸತ್ತು ಕರತಲಾಮಲಕ
(1) ಉಪನೀಸತ್ತು
(2) ಉಪಾನೀಷತ್ತು
(3) ಉಪನಿಷತ್ತು
(4) ಉಪನಿಸತು

44. ಶತ್ರುಗ್ನನು ರಾಮನ ಸಹೋದರ
(1) ಶತ್ರುಘ್ನ
(2) ಶಾತ್ರುಗ್ನ
(3) ಶ್ರತ್ರುಘ್ನ
(4) ಸರಿಯಾಗಿದೆ

45. ನಾನು ಗಟಿಕೋತ್ಸವ ದಲ್ಲಿ ಭಾಗವಹಿಸಿದ್ದೆ.
(1) ಘಾಟಿಕೋತ್ಸವ
(2) ಘಟಿಕೊತ್ಸವ
(3) ಘಟಿಕೋತ್ಸವ
(4) ಸರಿಯಾಗಿದೆ

www.shikarat.com

**ಸೂಚನೆ :** ಕೆಳಗೆ ಕೊಟ್ಟಿರುವ ಪದಗಳನ್ನು ಸುಧಾರಿಸಿ. ಸುಧಾರಣೆ ಇಲ್ಲದಿದ್ದರೆ ಸುಧಾರಣೆ ಇಲ್ಲ ಎಂದು ಗುರುತಿಸಿ. **(ಪ್ರಶ್ನೆಸಂಖ್ಯೆ 46-50)**

**46.** ಗೃಹಸ್ತ
(1) ಗ್ರಹಸ್ತ
(2) ಗೃಹಸ್ಥ
(3) ಗ್ರುಹಸ್ಥ
(4) ಸುಧಾರಣೆ ಇಲ್ಲ

**47.** ಪಕ್ಷಾತೀತ
(1) ಪಕ್ಷತೀತ
(2) ಪಾಕ್ಷಾತೀತ
(3) ಪಕ್ಸಾತೀತ
(4) ಸುಧಾರಣೆ ಇಲ್ಲ

**48.** ವಿಶ್ವ ವಿದ್ಯಾಲಯ
(1) ವಿಸ್ವ ವಿದ್ಯಾಲಯ
(2) ವಿಶ್ವ ವಿಧ್ಯಲಯ
(3) ವಿಶ್ವಾವಿಧ್ಯಾಲಯ
(4) ಸುಧಾರಣೆ ಇಲ್ಲ

**49.** ಆಶೀರ್ವಾದ
(1) ಆಶೀರ್ವಾದ
(2) ಆಸಿರ್ವಾದ
(3) ಆಸೀರ್ವಾದ
(4) ಸುಧಾರಣೆ ಇಲ್ಲ

**50.** ದನಂಜಯ
(1) ದನಾಂಜಯ
(2) ಧನಂಜಯ
(3) ಧಾನಂಜಯ
(4) ಸುಧಾರಣೆ ಇಲ್ಲ

**ಸೂಚನೆ :** ಕೆಳಗಿನವುಗಳಲ್ಲಿ ಖಾಲಿ ಇರುವ ಜಾಗಕ್ಕೆ ಸರಿಯಾದ ಉತ್ತರವನ್ನು ಸೂಚಿಸಿರಿ. **(ಪ್ರಶ್ನೆಸಂಖ್ಯೆ 51-55)**

**51.** ಹಳೆಗನ್ನಡ ಎಂಬುದು _____
(1) ಆಗಮ ಸಂಧಿ
(2) ಆದೇಶ ಸಂಧಿ
(3) ಗುಣ ಸಂಧಿ
(4) ಲೋಪ ಸಂಧಿ

**52.** ಗುರುವಿಗೆ ಎಂಬುದು _____
(1) ಸಂಬೋಧನಾ ವಿಭಕ್ತಿ
(2) ಚತುರ್ಥಿ ವಿಭಕ್ತಿ
(3) ಸಪ್ತಮಿ ವಿಭಕ್ತಿ
(4) ತೃತೀಯ ವಿಭಕ್ತಿ

**53.** ಮುಕ್ಕಣ್ಣ ಎಂಬುದು _____
(1) ತತ್ಪುರುಷ ಸಮಾಸ
(2) ಗಮಕ ಸಮಾಸ
(3) ಕರ್ಮಧಾರಯ ಸಮಾಸ
(4) ಬಹುವ್ರೀಹಿ ಸಮಾಸ

**54.** ಹಿಮಾಲಯ ಎಂಬುದು _____
(1) ರೂಢನಾಮ
(2) ಅನ್ವರ್ಥನಾಮ
(3) ಸರ್ವನಾಮ
(4) ಅಂಕಿತನಾಮ

**55.** ಭೀಮನಿಂದ ಬಕಾಸುರನು ಕೊಲ್ಲಲ್ಪಟ್ಟನು- ಈ ವಾಕ್ಯದಲ್ಲಿ ಭೀಮನಿಂದ ಎಂಬುದು
(1) ತೃತೀಯ ವಿಭಕ್ತಿ
(2) ಪಂಚಮಿ ವಿಭಕ್ತಿ
(3) ಷಷ್ಠಿ ವಿಭಕ್ತಿ
(4) ಪ್ರಥಮ ವಿಭಕ್ತಿ

www.shikarat.com

ಸೂಚನೆ : ಕೆಳಗಿನವುಗಳಲ್ಲಿ ಖಾಲಿ ಸ್ಥಾನವನ್ನು ಸೂಕ್ತ ಉತ್ತರದಿಂದ ತುಂಬಿರಿ. **(ಪ್ರಶ್ನೆಸಂಖ್ಯೆ 56-60)**

**56.** 'ಸೂರ್ಯೋದಯ' ಎಂಬುದು ______

(1) ವೃದ್ಧಿ ಸಂಧಿ

(2) ಯಣ್ ಸಂಧಿ

(3) ಗುಣ ಸಂಧಿ

(4) ಸವರ್ಣದೀರ್ಘ ಸಂಧಿ

**57.** 'ಊರಲ್ಲಿ' ಎಂಬುದು ______

(1) ಲೋಪ ಸಂಧಿ

(2) ಆದೇಶ ಸಂಧಿ

(3) ಆಗಮ ಸಂಧಿ

(4) ಸಂಧಿ ಕಾರ್ಯ ಇಲ್ಲ

**58.** 'ಪೆತ್ತಜಯಾನ್' ಈ ಕ್ರಿಯಾ ರೂಪ ಯಾವ ಕನ್ನಡದಲ್ಲಿ ಬಳಕೆಯಾಗಿತ್ತು ?

(1) ನಡುಗನ್ನಡ

(2) ಹಳೆಗನ್ನಡ

(3) ಪೂರ್ವದ ಹಳೆಗನ್ನಡ

(4) ಹೊಸಗನ್ನಡ

**59.** 'ಮರಗಿಡಬಳ್ಳಿಯು' ಎಂಬುದು ______

(1) ದ್ವಂದ್ವ ಸಮಾಸ

(2) ಅಂಶಿ ಸಮಾಸ

(3) ದ್ವಿಗು ಸಮಾಸ

(4) ಬಹುವ್ರೀಹಿ ಸಮಾಸ

**60.** 'ಧಗ ಧಗ' ಎಂಬುದು ______

(1) ಸಾಮಾನ್ಯ ಅವ್ಯಯ

(2) ಅನುಕರಣ ಅವ್ಯಯ

(3) ನಿಪಾತ ಅವ್ಯಯ

(4) ಅವಧಾರಣ ಅವ್ಯಯ

ಸೂಚನೆ : ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಸಂಖ್ಯೆಗಳಿಂದ ಗುರ್ತಿಸಿ. **(ಪ್ರಶ್ನೆಸಂಖ್ಯೆ 61-70)**

**61.** 'ಭಾರತೀಯ ಕಾವ್ಯ ಮೀಮಾಂಸೆ' ಕೃತಿಯ ಕರ್ತೃ

(1) ತೀ.ನಂ. ಶ್ರೀಕಂಠಯ್ಯ

(2) ಜಿ.ಎಸ್. ಶಿವರುದ್ರಪ್ಪ

(3) ಎಚ್. ತಿಪ್ಪೇರುದ್ರಸ್ವಾಮಿ

(4) ಟಿ.ವಿ. ವೆಂಕಟಾಚಲ ಶಾಸ್ತ್ರಿ

**62.** 'ಜೋಕುಮಾರ ಸ್ವಾಮಿ' ಈ ನಾಟಕ ಯಾರದ್ದು ?

(1) ಪರ್ವತವಾಣಿ

(2) ಚಂದ್ರಶೇಖರ ಕಂಬಾರ

(3) ಚಂದ್ರಶೇಖರ ಪಾಟೀಲ

(4) ಚಂದ್ರಕಾಂತ್ ಕುಸನೂರ

**63.** 'ಕುಲಕುಲವೆಂದು ಹೊಡೆದಾಡದಿರಿ' ಯಾವ ದಾಸರ ಕೀರ್ತನೆಯ ಸಾಲು ?

(1) ಪುರಂದರ ದಾಸ

(2) ಕನಕ ದಾಸ

(3) ವಿಜಯ ದಾಸ

(4) ಮೋಹನ ದಾಸ

**64.** 'ಕುರಿಗಳು ಸಾರ್ ಕುರಿಗಳು' ಕವನವನ್ನು ಬರೆದ ಕವಿ ಯಾರು ?

(1) ಎಚ್.ಎಸ್. ಶಿವಪ್ರಕಾಶ್

(2) ನಿಸಾರ್ ಅಹಮದ್

(3) ಚನ್ನವೀರ ಕಣವಿ

(4) ಪು.ತಿ. ನರಸಿಂಹಚಾರ್

**65.** 'ವಿಕ್ರಮಾರ್ಜುನ ವಿಜಯ' ಎಂತಹ ಕಾವ್ಯ ?

(1) ಚಂಪೂ ಕಾವ್ಯ

(2) ಷಟ್ಪದಿ ಕಾವ್ಯ

(3) ಸಾಂಗತ್ಯ ಕಾವ್ಯ

(4) ಶೃಂಗಾರ ಕಾವ್ಯ



www.shikarat.com

66. 'ಕಾವ್ಯಾರ್ಥ ಚಿಂತನ' ಕೃತಿಗೆ ಬಂದ ಪ್ರಶಸ್ತಿ

(1) ಜ್ಞಾನಪೀಠ ಪ್ರಶಸ್ತಿ

(2) ಪಂಪ ಪ್ರಶಸ್ತಿ

(3) ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

(4) ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

67. 'ನಾಕು ತಂತಿ' ಕೃತಿಯ ಕರ್ತೃ

(1) ಬೇಂದ್ರೆ

(2) ಕುವೆಂಪು

(3) ಕಣವಿ

(4) ನರಸಿಂಹಸ್ವಾಮಿ

68. ಇವುಗಳಲ್ಲಿ ದೇವನೂರ ಮಹದೇವರವರ ಕೃತಿಯನ್ನು ಗುರ್ತಿಸಿ.

(1) ಒಡಲಾಳ

(2) ಹಸಿರು ಹೊನ್ನು

(3) ಮುಸ್ಸಂಜೆ ಕಥಾ ಪ್ರಸಂಗ

(4) ಬೆಟ್ಟದ ಜೀವ

69. 'ವಿಷ್ಕಂಭಕ' ಈ ಪರ್ಯಾಯನಾಮ ಸಾಹಿತ್ಯದ ಯಾವ ಪ್ರಕಾರದ್ದು ?

(1) ಕಾದಂಬರಿ

(2) ನಾಟಕ

(3) ಸಣ್ಣ ಕಥೆ

(4) ವಿಮರ್ಶೆ

70. 'ರಾಮಾಯಣ ದರ್ಶನಂ' ಕೃತಿ ಯಾರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟಿದ್ದು ?

(1) ಬೇಂದ್ರೆ

(2) ಗೋಕಾಕ್

(3) ಕುವೆಂಪು

(4) ಮಾಸ್ತಿ

ಸೂಚನೆ : ಕೆಳಗಿನ ವಾಕ್ಯಗಳಲ್ಲಿ ಪದಗಳು ಕ್ರಮಬದ್ಧವಾಗಿಲ್ಲ. ಗೆರೆ ಎಳೆದು ಸೂಚಿಸಿರುವ ಭಾಗಗಳನ್ನು ಹೊಂದಿಸಿ ಅವುಗಳ ಅನುಕ್ರಮ-ಗಳನ್ನು ಗುರುತಿಸಿರಿ. **(ಪ್ರಶ್ನೆಸಂಖ್ಯೆ 71-75)**

ಉದಾ :

ನೋಡಿ (P) ದುರುಗುಟ್ಟಿ (Q) ಸುಟ್ಟುರಿಯುವಂತೆ (R) ದೌಡಾಯಿಸಿದಳು (S)

(1) QRPS

(2) RSPQ

(3) RQPS

(4) RPQS

ಇಲ್ಲಿ QRPS ಎಂಬುದು ಸರಿಯಾದ ಕ್ರಮ. ಆದುದರಿಂದ ಇಲ್ಲಿ (1) ಅನ್ನು ಗುರುತಿಸಬೇಕು.

71. ಬನಿಯಾ ಜಾತಿಯ (P) ಮನೆತನದವರು (Q) ಗಾಂಧಿ (R) ಪಂಗಡಕ್ಕೆ ಸೇರಿದವರು (S)

(1) QRPS

(2) RQPS

(3) RSPQ

(4) RPQS

www.shikarat.com

72. ಇಂದಿನ (P) ವಿದ್ಯಾರ್ಥಿಗಳಲ್ಲಿ (Q) ವಿದ್ಯೆ ಕಲಿಕೆಯ (R) ಮಟ್ಟ ಕುಸಿಯುತ್ತಿದೆ (S)

(1) RPQS
(2) PQRS
(3) QPRS
(4) SRQP

73. ಹೋದನು (P) ದೆಹಲಿಗೆ (Q) ಸಂದೀಪನು (R) ನಿನ್ನೆ (S)

(1) RSQP
(2) PQRS
(3) QPRS
(4) SRQP

74. ಹೇಗೆ (P) ತಿಳಿಸಿದ್ದಾರೆ (Q) ಕವಿ (R) ಗೆಳೆತನದ ಮಹತ್ವವನ್ನು (S)

(1) SRQP
(2) SRPQ
(3) PQRS
(4) QRPS

75. ಅರಳಿತು (P) ತಾವರೆ (Q) ಸೂರ್ಯ (R) ಉದಯಿಸಲು (S)

(1) QPRS
(2) RQPS
(3) SPQR
(4) RSQP

ಸೂಚನೆ : ಈ ಕೆಳಗೆ ಕೊಡಲಾದ ಆರು ವಾಕ್ಯಗಳುಳ್ಳ ಭಾಗಗಳಲ್ಲಿ ಒಂದು ಮತ್ತು ಆರನೇ ವಾಕ್ಯಗಳು ಸರಿಯಾದ ರೀತಿಯಲ್ಲಿವೆ. ನಡುವಿನ ನಾಲ್ಕು ವಾಕ್ಯಗಳು (PQRS) ಜಾಗ ಬದಲಾಯಿಸಿವೆ. ಅವುಗಳನ್ನು ಅರ್ಥ ಬರುವಂತೆ ಸರಿಯಾಗಿ ಹೊಂದಿಸಿ ಉತ್ತರ ಯಾವುದು ಎಂಬುದನ್ನು ಗುರುತಿಸಬೇಕು. **(ಪ್ರಶ್ನೆಸಂಖ್ಯೆ 76-80)**

ಉದಾ :

1. 1893 ರಲ್ಲಿ ಒಮ್ಮೆ ಸ್ವಾಮಿ ವಿವೇಕಾನಂದರು ಪ್ಯಾರಿಸ್‌ನಿಂದ ಗ್ರಾಮವೊಂದಕ್ಕೆ ಹೊರಟಿದ್ದರು.

P. ಕುದುರೆ ಗಾಡಿಯ ಚಾಲಕ, ಕೆಳಗಿಳಿದು ತನ್ನ ಮಕ್ಕಳನ್ನು ಮುದ್ದಾಡಿ ಮುಂದೆ ಸಾಗುತ್ತಾನೆ.

Q. ಹಿಂದೆ ಮುಳುಗಿಹೋಗಿದ್ದ ಬ್ಯಾಂಕನ್ನು ಕಟ್ಟಿ ಮತ್ತೆ ಮಾಲೀಕನಾಗುವ ಹಿರಿಯಾಸೆ ಚಾಲಕನಿಗಿತ್ತು.

R. ಈಗ ಸಂಸಾರ ಸಾಗಿಸಲು, ಸಾಲ ತೀರಿಸಲು ಚಾಲಕ ವೃತ್ತಿಯನ್ನು ಅವಲಂಬಿಸಿದ್ದ.

S. ಚಾಲಕನ ಪೂರ್ವ ಚರಿತ್ರೆ ಕೇಳಿದ ವಿವೇಕಾನಂದರು ಅತೀವ ಆನಂದಪಟ್ಟು.

6. "ಈ ವ್ಯಕ್ತಿ ಒಬ್ಬ ವ್ಯಾವಹಾರಿಕ ವೇದಾಂತಿ" ಎಂದು ಮೆಚ್ಚಿಕೊಂಡರು ಕೆಳಕ್ಕೆ ಉರುಳಿದರೂ ಸನ್ನಿವೇಶಕ್ಕೆ ಬಲಿಯಾಗಬಾರದು. ಅಲ್ಲವೆ ?

(1) PQRS
(2) QPSR
(3) RQSP
(4) SPRQ

ಈ ಉದಾಹರಣೆಯಲ್ಲಿ PQRS ಎಂಬುದು ಸರಿಯಾದ ವಾಕ್ಯ ಹೊಂದಾಣಿಕೆ ಕ್ರಮವಾಗಿದೆ. ಆದ್ದರಿಂದ ಇಲ್ಲಿ (1) ಅನ್ನು ಗುರುತಿಸಬೇಕು.



www.shikarat.com

**76.** 1. ಕೃಷ್ಣ ಸಂಧಾನಕ್ಕೆ ತೆರಳಿದ ಸಂದರ್ಭದ ಒಂದು ಪ್ರಸಂಗ.

P. ಕಾಡಬೇಡ ಕೃಷ್ಣ ಬಂದರೆ ರೂಢಿ ಮೆಚ್ಚಲ್ಲ ನನ್ನ ನಿಷ್ಠೆ ದುರ್ಯೋಧನನಿಗೆ ಹೊರತು ಅಧಿಕಾರಕ್ಕಲ್ಲ.

Q. ಕರ್ಣನಿಗೆ ಜನ್ಮ ರಹಸ್ಯವನ್ನು ಕೃಷ್ಣ ಹೇಳುತ್ತಾನೆ. ನೀನು ಕುಂತಿಯ ಮಗ ಈ ರಾಜ್ಯಕ್ಕೆ ನಿಜವಾದ ಉತ್ತರಾಧಿಕಾರಿ.

R. ಪಾಂಡವರ ಕಡೆ ಬಾ ನಿನ್ನನ್ನು ರಾಜನನ್ನಾಗಿ ಮಾಡುತ್ತೇನೆ.

S. ರಾಜ್ಯಕ್ಕೆ ಒಡೆಯನಾಗಬೇಕಾದವನು ದುರ್ಯೋಧನನ ಎಂಜಲಿಗೆ ಕೈಒಡ್ಡಬೇಡ.

6. ಇಲ್ಲಿ ಕರ್ಣ ಉನ್ನತೋನ್ನತ ಆದರ್ಶ, ಸ್ವಾಮಿ ನಿಷ್ಠೆಯನ್ನು ತೋರುತ್ತಾನೆ.

(1) PQRS
(2) QRPS
(3) QRSP
(4) RSQP

**77.** 1. ತಾಯಿ ಮತ್ತು ತವರಿನ ಅನ್ಯೋನ್ಯ ಸಂಬಂಧ ಚೊಚ್ಚಲ ಹೆರಿಗೆಗೆ ಬಂದ ಮಗಳ ಪ್ರಸಂಗ.

P. ತೊಟ್ಟಿಲ ಹೊತ್ಕೊಂಡು

Q. ತೌರೂರು ತಿಟ್ಟತ್ತಿ ತಿರುಗಿ ನೋಡ್ಯಾಳ

R. ತೌರ್ಬಣ್ಣ ಉಟುಗೊಂಡು

S. ಅಪ್ಪಕೊಟ್ಟೆಮ್ಮೆ ಹೊಡಕೊಂಡು

6. ಇಲ್ಲಿ ಅವಳ ನೋಟದಲ್ಲಿ ಮರೆಯಾಗು-ತ್ತಿರುವ ತವರಿನ ಸಂಬಂಧಗಳ ನೆನಪನ್ನು ಜಾನಪದ ಕವಿ ಸೊಗಸಾಗಿ ಕಟ್ಟಿ- ಕೊಟ್ಟಿದ್ದಾನೆ.

(1) PRSQ
(2) RSQP
(3) QRSP
(4) SRQP

**78.** ಜಾನಪದ ಕಥೆಯ ಪ್ರಸಂಗ.

1. ಒಂದೂರಾಗೆ ಕೆಂಪ ಅನ್ನೊ ದಡ್ಡ ಇದ್ದ. ಅವರಪ್ಪ ಅವನನ್ನ ಒಬ್ಬ ಗುರುಗಳ ಹತ್ತಿರ ವಿದ್ಯೆ ಕಲಿಯಾಕೆ ಬಿಟ್ಟರು. ಗುರುಗಳು ಒಂದಿನ ಅವನಿಗೆ ಹತ್ತಿರದಲ್ಲೆ ಇದ್ದ ಮರ ಮತ್ತು ಕುದುರೆ ತೋರಿಸಿ ಕುದುರೆ ಈಗ ಏನು ಮಾಡುತ್ತಿದೆ ಹೇಳು ಎಂದರು. ಕುದುರೆ ಮರಕ್ಕೆ ಮೈ ತಿಕ್ಕುತ್ತಿದೆ, ಆಮೇಲೆ ಇತ್ತ ನೋಡುತ್ತಿದೆ, ಆಮೇಲೆ ಓಡಿ ಹೋಗುತ್ತಿದೆ ಎಂದ. ನೀ ತಿಕ್ಕುವುದ ನಾ ಬಲ್ಲೆ, ನೀ ನೋಡುವುದ ನಾ ಬಲ್ಲೆ, ನೀ ಓಡಿ ಹೋಗುವುದ ನಾ ಬಲ್ಲೆ ; ಇದನ್ನು ಬಾಯಿಪಾಠ ಮಾಡು ಎಂದರು. ಇದನ್ನು ಸದಾ ಬಾಯಿ ಪಾಠ ಮಾಡ್ತಿದ್ದ.
ಇತ್ತ ಆ ದೇಶದ ರಾಜನನ್ನು ಕ್ಷೌರಿಕನಿಂದ ಕೊಲ್ಲಿಸುವ ಉಪಾಯವನ್ನು ಮಂತ್ರಿ ಮಾಡಿರುತ್ತಾನೆ, ಆದರಂತೆ ಕ್ಷೌರಿಕ ರಾಜನ ಕತ್ತನ್ನು ಕತ್ತರಿಸಲು ಕತ್ತಿಯು ಹರಿತವಾಗಲೆಂದು ಚೆನ್ನಾಗಿ ತಿಕ್ಕುತ್ತಿರುತ್ತಾನೆ. ಕ್ಷೌರಿಕನ ಮನೆಯ ಮುಂದೆ ಈ ದಡ್ಡ ಕೆಂಪ ಬರುತ್ತ

P. 'ನೀ ತಿಕ್ಕುವುದ ನಾ ಬಲ್ಲೆ' ಎಂದ ಕ್ಷೌರಿಕ ಗಾಬರಿಯಾಗಿ ಇವನನ್ನು ನೋಡಿದ

Q. 'ನೀ ನೋಡುವುದ ನಾ ಬಲ್ಲೆ' ಎಂದ. ಕ್ಷೌರಿಕ ಹೆದರಿ ನಮ್ಮ ಗುಟ್ಟೆಲ್ಲ ರಟ್ಟಾಗಿ ಹೋಯಿತು ಅಂತ ಓಡೋದಿಕ್ಕೆ ಶುರು ಮಾಡಿದ

R. 'ನೀ ಓಡುವುದ ನಾ ಬಲ್ಲೆ' ಎಂದ ಇನ್ನು ಜೋರಾಗಿ ಓಡಿದ

S. ರಾಜನ ಕ್ಷೌರಿಕ ಓಡಿ ಹೋಗುವುದನ್ನು ನೋಡಿದ ಪ್ರಜೆಗಳು ಅವನನ್ನು ಹಿಡಿದು ವಿಚಾರಣೆಗೆ ಒಳಪಡಿಸಿದರು. ರಾಜನ ಕೊಲೆಯ ರಹಸ್ಯ ಬಯಲಾಗಿ ಅವನನ್ನು ಮಂತ್ರಿಯನ್ನು ಗಲ್ಲಿಗೇರಿಸಿದರು.

6. ದಡ್ಡರು ಒಮ್ಮೊಮ್ಮೆ ಅಸಾಧ್ಯವಾದುದನ್ನು ಸಾಧ್ಯ ಮಾಡುತ್ತಾರೆ.

(1) QRPS (2) RQPS
(3) PQRS (4) SPQR

www.shikarat.com

**79.** 1. ಮಂಚೇನಹಳ್ಳಿ ಮಾರಮ್ಮ ನಮ್ಮೂರಿನ ಪ್ರಸಿದ್ಧ ದೇವತೆ

P. ಅಮವಾಸ್ಯೆ ಬಂತು ಬಲಿ ಕೊಡಬೇಕು ಅಂತ ಕುಣಿತಿದ್ದ ಅವನೆ ಸಾಕಿದ್ದ ಕುರಿ ತಂದು ಕೊಟ್ರು. ಇದು ಬ್ಯಾಡ ಬೇರೆ ಬೇಕು ಅಂದ. ಇವನ ಕಳ್ಳಾಟ ಗೊತ್ತಾಗಿ ಚೆನ್ನಾಗಿ ಚಚ್ಚಿದ್ರು.

Q. ನಮ್ಮೂರು ತಿಮ್ಮನಿಗೆ ಸದಾ ಮಾಂಸ ತಿನ್ನೋ ಚಪಲ. ಅಮಾವಾಸ್ಯೆ-ಪೌರ್ಣಮಿ ಗೊಮ್ಮೆ ಮಾರಮ್ಮ ಮೈಮೇಲೆ ಬಂದಂಗೆ ಕುಣಿತಿದ್ದ.

R. ಜನರೆಲ್ಲ ಹೆದರಿ ಏನು ತಪ್ಪು ಕಾಣ್ಕೆ ಕೊಡಬೇಕು ತಾಯಿ ಅಂತ ಕೇಳ್ತಿದ್ರು. ಲೇ ಭಕ್ತರಾ ಪ್ರತಿಸಾರಿ ನಾನು ಬಂದಾಗ ಒಂದೊಂದು ಕುರಿ ಬಲಿ ಕೊಡಬೇಕಂತಿದ್ದ.

S. ಪ್ರತಿಸಾರಿ ಮೈಮೇಲೆ ಮಾರಮ್ಮ ಬಂದಾಗಲೂ ಒಂದೊಂದು ಕುರಿ ತಂದು ಒಪ್ಪಿಸುತ್ತಿದ್ರು, ಅದನ್ನ ಬಲಿ ಕೊಟ್ಟು ತಿಂತಿದ್ದ.

6. ಹೊಟ್ಟೆ ಪಾಡಿಗೋಸ್ಕರ ನಾನಾ ವೇಷ ಹಾಕುತ್ತ ಜನರ ದೈವಿಕ ಭಾವನೆಯನ್ನು ದುರುಪಯೋಗ ಪಡಿಸಿಕೊಳ್ಳುವುದು ಇಲ್ಲಿದೆ.

(1) QRSP (2) PQRS
(3) RQPS (4) SPQR

**80.** 1. ಜನಪದರ ದೈನಂದಿನ ಬದುಕಿನ ಒಂದು ಪ್ರಸಂಗ

P. ಊಟದ ಹಂಬಲವ ಮರೆತಾನು

Q. ತೋಟಕ್ಕೆ ಹೋದಣ್ಣ ಊಟಕ್ಕೆ ಬರಲಿಲ್ಲ

R. ತಲೆ ತುಂಬ ಮುಡಕಂಡು

S. ತೋಟದ ಬಗೆ ಬಗೆ ಹೂವ

6. ಊಟಕ್ಕೆ ಬರದ ಅಣ್ಣನ ದಾರಿ ಕಾದ ತಂಗಿ ಹೇಳುವ ಹಾಡು.

(1) QRPS (2) RSPQ
(3) SPQR (4) QSRP

ಸೂಚನೆ : ಕೆಳಗೆ ಕೊಡಲಾದ ಗಾದೆಗಳ ಅರ್ಥವನ್ನು ಗ್ರಹಿಸಿ ನಂತರ ಕೇಳಲಾದ ಪ್ರಶ್ನೆಗಳಿಗೆ ಸೂಕ್ತ ಉತ್ತರ ಗುರ್ತಿಸಿ. **(ಪ್ರಶ್ನೆಸಂಖ್ಯೆ 81-85)**

**81.** ಉಪ್ಪು ತಿಂದೋನು ನೀರು ಕುಡಿಯಲೇ ಬೇಕು.

(1) ಬಾಯಾರಿಕೆ ಜಾಸ್ತಿ ಆಗ್ತದೆ ನೀರು ಕುಡಿಯಬೇಕು.

(2) ಉಪ್ಪು ತಿನ್ನುವಾಗ ಯೋಚನೆ ಮಾಡಬೇಕು.

(3) ತಪ್ಪು ಮಾಡಿದವನಿಗೆ ಶಿಕ್ಷೆ ತಪ್ಪಿದ್ದಲ್ಲ ಅಂತ.

(4) ಹೆಚ್ಚಿಗೆ ಉಪ್ಪು ತಿನ್ನೋದು ಆರೋಗ್ಯಕ್ಕೆ ಒಳ್ಳೆಯದಲ್ಲ

**82.** ಆಕಾಶ ನೋಡೋಕೆ ನೂಕುನುಗ್ಗಲು.

(1) ಜನ ದೊಂಬಿಯಾದಾಗ ತಳ್ಳಾಡುವುದು

(2) ಆಕಾಶವನ್ನು ಎಲ್ಲಿ ಬೇಕಾದರೂ ನೋಡಬಹುದು ಅಂತ

(3) ಆತುರ ಪಡದೆ ಸಮಾಧಾನದಿಂದ ಕೆಲಸ ಮಾಡಬೇಕು ಅಂತ.

(4) ಕೆಲಸ ಮಾಡದ ಸೋಂಬೇರಿ ತನದ ಮಾತು.

www.shikarat.com

83. ಅತ್ತೆಗೊಂದು ಕಾಲ ಸೊಸೆಗೊಂದು ಕಾಲ

(1) ಅತ್ತೆ-ಸೊಸೆ ಜಗಳವಾಡಿದಾಗ ಬರುವ ಮಾತು

(2) ಅತ್ತೆಗೆ ವಯಸ್ಸಾದ ಮೇಲೆ ಸೊಸೆಯ ಯಜಮಾನಿಕೆಯ ಕಾಲ

(3) ಮನೆಗೆ ಬಂದ ಸೊಸೆ ನಾಳೆ ಅತ್ತೆ ಆಗೋದು

(4) ಪ್ರತಿಯೊಬ್ಬ ಮನುಷ್ಯನಿಗೂ ಒಳ್ಳೆಯ ಕಾಲ ಬಂದೇ ಬರುತ್ತದೆ

84. ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರಿಗೆ ಕೊಡೆ ಹಿಡ್ದ.

(1) ಹಣ ಬಂದಾಗ ಅದನ್ನ ಅರಗಿಸಿ ಕೊಳ್ಳಲಾರದೆ ಅಹಂಕಾರ ಪಡುವುದು

(2) ಮಳೆ ಬಂದಾಗ ಎದ್ದು ಕೊಡೆ ಹಿಡಿಯುವುದು

(3) ಐಶ್ವರ್ಯವನ್ನು ರಾತ್ರಿಯೆಲ್ಲ ಕಾಯುವುದು

(4) ಅರ್ಧರಾತ್ರಿಯಲ್ಲಿ ಎದ್ದು ನಿದ್ದೆ ಕೆಡೋದು

85. ಆಳಾಗಿ ದುಡಿ ಅರಸಾಗಿ ಉಣ್ಣು

(1) ಕಷ್ಟಪಟ್ಟು ಸಂಪಾದನೆ ಮಾಡಿದರೆ ರಾಜರ ತರ ಬದುಕಬಹುದು.

(2) ಅರಸ ಆಗ ಬೇಕಾದರೆ ಆಳಾಗಬೇಕು

(3) ರಾಜ ಸುಖವಾಗಿ ಉಣ್ಣುತ್ತಾನೆ, ಆಳು ದುಡಿಯುತ್ತಾನೆ.

(4) ಆಳಾಗಿ ಸದಾ ಕೆಲಸ ಮಾಡ್ತಿರಬೇಕು

ಸೂಚನೆ : ಕೆಳಗೆ ಕೊಡಲಾಗಿರುವ ಶಬ್ದಗಳನ್ನು ಓದಿ ಸರಿಯಾದ ಅರ್ಥ ಗ್ರಹಿಸಿ. ಕೇಳಲಾದ ಪ್ರಶ್ನೆಗಳಿಗೆ ಸೂಕ್ತ ಉತ್ತರ ಗುರ್ತಿಸಿ. **(ಪ್ರಶ್ನೆಸಂಖ್ಯೆ 86-90)**

86. 'ಅಮರ' ಎಂದರೆ

(1) ಮರಣವಿಲ್ಲದ

(2) ಮರವಲ್ಲದ್ದು

(3) ಮರಣ ಹೊಂದುವುದು

(4) ಶಾಶ್ವತವಲ್ಲದ್ದು

87. ಕಳೇಬರ

(1) ಮರಣ ಶಾಸನ

(2) ಬಾಡಿದ ಮುಖ

(3) ಮೃತ ದೇಹ

(4) ಹಣೆ ಬರಹ

88. ತ್ರಿನೇತ್ರ ಎಂದರೆ

(1) ಬೆಂಕಿ ಕಾರುವ ಕಣ್ಣಿನ

(2) ದೃಷ್ಟಿ ಬೊಟ್ಟಿನ ಕಣ್ಣು

(3) ಕೆಂಡದ ದೃಷ್ಟಿವುಳ್ಳವ

(4) ಶಿವನ ಮೂರನೆ ಕಣ್ಣು

89. ಭೂತ

(1) ದುಷ್ಟ

(2) ಆಗಿಹೋದ ಕಾಲ

(3) ಭಯ

(4) ಪಿಶಾಚಿ

www.shikarat.com

90. ಬೆನ್ನತ್ತು

(1) ಬೆನ್ನಿನ ಗಾಯ

(2) ಸದಾ ಹಿಂಬಾಲಿಸು

(3) ಬೇಡಿಸು

(4) ಭಯ ಬೀಳಿಸು

ಈ ಕೆಳಗಿನ ಪ್ರಶ್ನೆಗಳನ್ನು ಓದಿ ಉತ್ತರವನ್ನು ಗುರ್ತಿಸಿ. **(ಪ್ರಶ್ನೆಸಂಖ್ಯೆ 91-93)**

91. ಕನ್ನಡಕ್ಕೆ ಎಷ್ಟು ಜ್ಞಾನಪೀಠ ಪ್ರಶಸ್ತಿ ಬಂದಿವೆ ?

(1) 6

(2) 8

(3) 5

(4) 10

92. ರಗಳೆಗಳಲ್ಲಿ ಎಷ್ಟು ವಿಧ ?

(1) 4

(2) 6

(3) 3

(4) 8

93. ಕನ್ನಡದ ಮೊಟ್ಟ ಮೊದಲ ಶಾಸನ ಯಾವುದು ?

(1) ಆತಕೂರು ಶಾಸನ

(2) ಹಲ್ಮಿಡಿ ಶಾಸನ

(3) ಜಿನವಲ್ಲಭನ ಗಂಗಾಧರಂ ಶಾಸನ

(4) ತಾಳಗುಂದ ಶಾಸನ

ಸೂಚನೆ : ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ ಅರ್ಥ ಗ್ರಹಿಸಿ ಕೇಳಲಾದ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಗುರ್ತಿಸಿ. **(ಪ್ರಶ್ನೆಸಂಖ್ಯೆ 94-100)**

ಋಣತ್ರಯಗಳಲ್ಲಿ ಪಿತೃ ಋಣ ಎಂಬುದು ಒಂದು. ಪಿತೃ ಋಣ ಎಂದರೆ ತಂದೆ ತಾಯಿಗಳು ನಮಗೆ ಜನ್ಮ ಕೊಟ್ಟು ಸಾಕಿ ಸಲಹಿದ ಕಾರಣಕ್ಕೆ ಇರುವ ಋಣ. ಈ ಋಣ ತೀರಿಸಬೇಕಾದ್ದು ಪ್ರತಿಯೊಬ್ಬನ ಕರ್ತವ್ಯ. ತಾಯಿ ತಂದೆಯರ ಸೇವೆ ಮಾಡುತ್ತ ಕೃತ ಕೃತ್ಯರಾದ ವ್ಯಕ್ತಿಗಳಲ್ಲಿ ಶ್ರವಣ ಕುಮಾರನು ಒಬ್ಬ. ತುಂಡು ಮುನಿಯ ಮಗನಾದ್ದರಿಂದ ಇತನನ್ನು ತಾಂಡವ ಮುನಿ ಎಂದು ಕರೆಯುತ್ತಾರೆ. ಕಣ್ಣು ಕಾಣದ ತಂದೆ ತಾಯಿಯರನ್ನು ಹೊತ್ತು ತೀರ್ಥಯಾತ್ರೆಗೆ ಹೊರಟಾಗ ಮಾರ್ಗ ಮಧ್ಯೆ ಕಾಡಿನಲ್ಲಿ ಬಾಯಾರಿದ ತಂದೆ ತಾಯಿಗಳಿಗೆ ನೀರು ತರಲು ಹೋಗುತ್ತಾನೆ. ನೀರು ತುಂಬಿಕೊಳ್ಳುತ್ತಿರುವ ಶ್ರವಣಕುಮಾರನನ್ನು ಯಾವುದೋ ಪ್ರಾಣಿಯೆಂದು ಭಾವಿಸಿ ಶಬ್ದವೇದಿ ವಿದ್ಯೆಯಿಂದ ಬಾಣ ಪ್ರಯೋಗಿಸಿ ಕೊಲ್ಲುತ್ತಾನೆ. ಇದನ್ನು ತಿಳಿದ ವೃದ್ಧ ತಂದೆ ತುಂಡು ಮುನಿ ದಶರಥನಿಗೆ ನಿನಗೂ ಸಹ



www.shikarat.com

ಪುತ್ರ ಶೋಕದಿಂದ ಸಾವು ಬರಲಿ ಎಂದು ಶಾಪ ಕೊಡುತ್ತಾನೆ.

ದಶರಥ ತನ್ನ ಹಿರಿಯ ಮಗ ರಾಮನಿಗೆ ಪಟ್ಟ ಕಟ್ಟಬೇಕೆಂದು ತೀರ್ಮಾನಿಸಿದಾಗ ಮಂಥರೆಯ ದುರ್ಬೋಧನೆಗೆ ಒಳಗಾದ ಕೈಕೆಯಿ ಯಿಂದ ಶ್ರೀರಾಮನು ಸೀತೆ-ಲಕ್ಷ್ಮಣರ ಸಮೇತವಾಗಿ ಹದಿನಾಲ್ಕು ವರ್ಷ ವನವಾಸ ಅನುಭವಿಸಬೇಕಾಯ್ತು. ರಾಮನನ್ನು ಕಾಡಿಗೆ ಕಳುಹಿಸಲು ಮನ ಒಪ್ಪದ ದಶರಥ ಪ್ರಜ್ಞಾಹೀನನಾಗುತ್ತಾನೆ. ಎಚ್ಚರಗೊಂಡಾಗ ರಾಮ ಸೀತೆ ಲಕ್ಷ್ಮಣರ ಸಮೇತ ಕಾಡಿಗೆ ಹೋಗಲು ಸಿದ್ಧರಾಗಿರುತ್ತಾರೆ. ಇದನ್ನು ಕಂಡ ದಶರಥ ಮಂತ್ರಿ ಸುಮಂತ್ರನನ್ನು ಕರೆದು ರಾಮ ಲಕ್ಷ್ಮಣರೊಂದಿಗೆ ನೀನು ಹೋಗಿ ಅವರ ಮನವೊಲಿಸಿ ಅಯೋಧ್ಯೆಗೆ ಹಿಂತಿರುಗುವಂತೆ ಮಾಡಬೇಕೆಂದು ಆಜ್ಞಾಪಿಸುತ್ತಾನೆ. ಮಂತ್ರಿ ಬರಿಗೈಲಿ ಹಿಂತಿರುಗಿ ಬಂದದ್ದನ್ನು ತಿಳಿದು ತನ್ನ ನಾಲ್ವರು ಮಕ್ಕಳಲ್ಲಿ ರಾಮ ಲಕ್ಷ್ಮಣರು ಅರಣ್ಯವಾಸಿಗಳಾದರು. ಭರತ-ಶತೃಘ್ನರು ಮಾವನ ಮನೆಯಲ್ಲಿದ್ದಾರೆ. ಪುತ್ರಶೋಕ ನನ್ನನ್ನು ಕಾಡುತ್ತಿದೆ ಹಾಗಾಗಿ ತುಂಡು ಮುನಿಯ ಶಾಪದಂತೆ ತನ್ನ ಅವಸಾನ ಕಾಲ ಸಮೀಪಿಸಿತೆಂದು ತಿಳಿದು ಬಳಿಯಲ್ಲಿದ್ದ ಪತ್ನಿ ಕೌಶಲ್ಯೆಗೆ ಹಲವು ವರ್ಷಗಳ ಹಿಂದೆ ನಡೆದ ಘಟನೆಯನ್ನು ವಿವರಿಸಿ ಪ್ರಾಣತ್ಯಾಗ ಮಾಡುತ್ತಾನೆ.

**94.** ಪಿತೃ ಋಣ ಎಂದರೆ ಏನು ?

(1) ಸತ್ತಾಗ ತೀರಿಸುವ ಋಣ

(2) ತಂದೆ ಕೊಟ್ಟ ಹಣವನ್ನು ತೀರಿಸುವುದು

(3) ತಂದೆ ತಾಯಿಯರು ಜನ್ಮಕೊಟ್ಟು ಸಾಕಿ ಸಲಹಿದ್ದಕ್ಕೆ ಇರುವ ಋಣ

(4) ತಂದೆ ತಾಯಿ ಮಾಡಬೇಕಾದ ಕರ್ತವ್ಯ

**95.** ಕಣ್ಣು ಕಾಣದ ತಂದೆ ತಾಯಿಯರನ್ನು ಹೊತ್ತು ತೀರ್ಥಯಾತ್ರೆ ಮಾಡಿದವನು ಯಾರು ?

(1) ಬೃಗುಕುಮಾರ

(2) ಶ್ರವಣಕುಮಾರ

(3) ಧೃವಕುಮಾರ

(4) ಮುನಿಕುಮಾರ

www.shikarat.com

96. ತುಂಡು ಮುನಿ ದಶರಥನಿಗೆ ಕೊಡುವ ಶಾಪ ಯಾವುದು ?

(1) ಯುದ್ಧಭೂಮಿಯಲ್ಲಿ ಸಾವು ಬರಲಿ

(2) ಶತ್ರುಗಳ ಕೈಯಲ್ಲಿ ಸಾವು ಬರಲಿ

(3) ಪುತ್ರ ಶೋಕದಿಂದ ಸಾವು ಬರಲಿ

(4) ಪತ್ನಿಯರ ಅಗಲಿಕೆಯಿಂದ ಸಾವು ಬರಲಿ

97. ದಶರಥ ಯಾರಿಗೆ ಪಟ್ಟ ಕಟ್ಟಬೇಕೆಂದು ನಿಶ್ಚಯಿಸಿದ ?

(1) ಶ್ರೀರಾಮನಿಗೆ

(2) ಭರತನಿಗೆ

(3) ಲಕ್ಷ್ಮಣನಿಗೆ

(4) ಶತ್ರುಘ್ನನಿಗೆ

98. ಯಾರಿಂದಾಗಿ ರಾಮ ಲಕ್ಷ್ಮಣ ಸೀತೆ ವನವಾಸ ಅನುಭವಿಸುವಂತಾಯ್ತು ?

(1) ಕೌಸಲ್ಯೆ ಯಿಂದ

(2) ಕೈಕೆಯಿ ಯಿಂದ

(3) ಸುಮಿತ್ರೆ ಯಿಂದ

(4) ಮಂಥರೆ ಯಿಂದ

99. ಮಂತ್ರಿ ಸುಮಂತ್ರನಿಗೆ ದಶರಥ ಏನೆಂದು ಆಜ್ಞಾಪಿಸುತ್ತಾನೆ ?

(1) ರಾಮ ಲಕ್ಷ್ಮಣರನ್ನು ಅಯೋಧ್ಯೆಗೆ ಮರಳುವಂತೆ ಮಾಡಬೇಕೆಂದು

(2) ರಾಮ ಲಕ್ಷ್ಮಣರನ್ನು ಸುರಕ್ಷಿತವಾಗಿ ಕಾಡಿಗೆ ಬಿಟ್ಟು ಬರಬೇಕೆಂದು

(3) ಭರತ-ಶತ್ರುಘ್ನರನ್ನು ಕರೆ ತರಬೇಕೆಂದು

(4) ರಾಮ ಲಕ್ಷ್ಮಣರ ಜೊತೆ ನೀನು ಕಾಡಿಗೆ ಹೋಗಬೇಕೆಂದು

100. ರಾಮ-ಲಕ್ಷ್ಮಣರು ಕಾಡಿಗೆ ಹೋದಾಗ ಭರತ-ಶತ್ರುಘ್ನರು ಎಲ್ಲಿದ್ದರು ?

(1) ಬೇಟೆಗೆ ಹೋಗಿದ್ದರು

(2) ಋಶ್ಯಾಶ್ರಮದಲ್ಲಿದ್ದರು

(3) ಮಾವನ ಮನೆಯಲ್ಲಿದ್ದರು

(4) ಅರಮನೆಯಲ್ಲಿದ್ದರು

www.shikarat.com